ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಕಾರ್ಯಪಾಲಕ ಅಭಿಯಂತರವರ ಕಾರ್ಯಾಲಯ
ಕಾಜುಬಾಗ್,ಕಾರವಾರ-581301
ಕಛೇರಿ: 0836-2441472 ಫ್ಯಾಕ್ಸ್: 0836-2740845

ಸಂ.ಕಜಮ/ಕಾಪಾಅ/ತಾಶಾ/ಸಅ/ಕಾರವಾರ/2019-20/ 1660 ದಿನಾಂಕ: 18 MAR 2020

ರವರಿಗೆ,

ಸಹಾಯಕ ಕಾರ್ಯಪಾಲಕ ಅಭಿಯಂತರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಕುಮಟಾ ಉಪವಿಭಾಗ, ಕುಮಟಾ

ಮಾನ್ಯರೇ,

**ವಿಷಯ:-** ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ವತಿಯಿಂದ ಗೋಕರ್ಣ ಮತ್ತು ಇತರ 7 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಡಿ ಕೈಗೊಳ್ಳುವ ಅಭಿವೃದ್ಧಿ ಕಾಮಗಾರಿಗಳಿಗೆ ನಿರಾಪೇಕ್ಷಣ ಪತ್ರವನ್ನು ನೀಡುವ ಕುರಿತು.

**ಉಲ್ಲೇಖ:**
1. ಸಹಾಯಕ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಕುಮಟಾ ಉಪವಿಭಾಗ, ಕುಮಟಾ ಕಚೇರಿ ಪತ್ರ ಸಂಖ್ಯೆ : 381 ದಿ : 18-03-2020
2. ಸಹಾಯಕ ಕಾರ್ಯಪಾಲಕ ಅಭಿಯಂತರು,ಕನನೀಸ ಮತ್ತು ಒಚ ಮಂಡಳಿ ಉಪವಿಭಾಗ ಕಾರವಾರ ಇವರ ಕಛೇರಿ ಪತ್ರ ಸಂಖ್ಯೆ :2054 ದಿನಾಂಕ :18.03.2020

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ವತಿಯಿಂದ ನಿರ್ಮಿಸಲಾಗಿರುವ ಗುಂಡಬಾಳದ ಗೋಕರ್ಣ ಮತ್ತು ಇತರ 7 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಡಿ ಜ್ಯಾಕ್‌ವೆಲ್ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು 31.56 ಚ.ಮೀ ಜಾಗದ ಅವಶ್ಯಕತೆಯನ್ನು ಪ್ರಸ್ತಾಪಿಸಿ ಸದರಿ ಪ್ರದೇಶದಲ್ಲಿ ಕಾಮಗಾರಿ ಕೈಗೊಳ್ಳಲು ಅರಣ್ಯ ಇಲಾಖೆಯ ಅನುಮತಿಯನ್ನು ಕೋರಿರುವ ಬಗ್ಗೆ ತಿಳಿಸಿರುತ್ತಾರೆ. ಆದರೆ ಸದರಿ ಪ್ರದೇಶವು ಗಂಗಾವಳ ನದಿಗೆ ಅಡ್ಡಲಾಗಿ ಕಿಂಡಿ ಅಣೆಕಟ್ಟು ನಿರ್ಮಾಣದಿಂದ ಮುಳುಗಡೆಯಾಗುವ ಅರಣ್ಯ ಜಾಗದಲ್ಲಿ ಬರುವುದರಿಂದ ಗೋಕರ್ಣ ಕುಡಿಯುವ ನೀರು ಯೋಜನೆಯಡಿ ಜ್ಯಾಕ್‌ವೆಲ್ ಅಭಿವೃದ್ಧಿ ಕಾಮಗಾರಿ ಕೈಗೊಂಡಲ್ಲಿ ಮುಂದೆ ನಿರ್ಮಿಸಲ್ಪಡುವ ಕಿಂಡಿ ಅಣೆಕಟ್ಟಿಗೆ ಯಾವುದೇ ತೊಂದರೆ ಆಗುವುದಿಲ್ಲವೆಂದು ಅನುಮತಿ ಮತ್ತು ನಿರಾಪೇಕ್ಷಣ ಪತ್ರವನ್ನು ಕನನೀಸ ಮತ್ತು ಒಚ ಮಂಡಳಿ ವತಿಯಿಂದ ಪಡೆಯಲು ಅರಣ್ಯ ಇಲಾಖೆಯವರು ನಿರ್ದೇಶನ ನೀಡಿರುತ್ತಾರೆ ಎಂದು ಮೇಲಿನ ಉಲ್ಲೇಖ (1)ರಲ್ಲಿ ತಿಳಿಸಿರುತ್ತಾರೆ.

ಈಗಾಗಲೇ ಗಂಗಾವಳ ನದಿಗೆ ಅಡ್ಡಲಾಗಿ ಕಿಂಡಿ ಅಣೆಕಟ್ಟು ನಿರ್ಮಿಸುವ ಸಲುವಾಗಿ ಅರಣ್ಯ / ಅರಣ್ಯೇತರ ಜಾಗಗಳನ್ನು ಬಿಡುಗಡೆ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ. ಪ್ರಸ್ತಾವನೆಯು ಸರ್ಕಾರದಲ್ಲಿ ಪರಿಶೀಲನೆ ಹಂತದಲ್ಲಿರುತ್ತದೆ. ಮೇಲೆ ತಿಳಿಸಿರುವ 31.56 ಚ.ಮೀ ಜಾಗವು ಕನನೀಸ ಮತ್ತು ಒಚ ಮಂಡಳಿ ಅವರು ಸಲ್ಲಿಸಿರುವ ಪ್ರಸ್ತಾವನೆ

(FP/KA/WATER/27276/2017/VENTED BARRAGE) ಅಡಿಯಲ್ಲಿ ಬರುತ್ತದೆಂದು ಅರಣ್ಯ ಇಲಾಖೆಯವರ ಪತ್ರದಲ್ಲಿ ತಿಳಿಸಿರುತ್ತಾರೆ. ಉಲ್ಲೇಖಿತ (1) ರ ಪತ್ರದಲ್ಲಿ ತಿಳಿಸಿರುವಂತೆ ಗುಂಡಬಾಳದಲ್ಲಿರುವ ಗೋಕರ್ಣ ಮತ್ತು ಇತರ 7 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯಡಿ ನಿರ್ಮಿಸಿರುವ ಜಾಕ್‌ವೆಲ್ ಪಂಪುಮನೆ ನೆಲದ ಮಟ್ಟ RL 13.275m ಇರುತ್ತದೆ. ಕಿಂಡಿ ಆಣೆಕಟ್ಟಿನ HFL 11.15m ಇರುತ್ತದೆ. ಆದ್ದರಿಂದ ಮೇಲೆ ತಿಳಿಸಿರುವ ಕಾಮಗಾರಿ ಕೈಗೊಳ್ಳಲು ತಾಂತ್ರಿಕವಾಗಿ ಯಾವುದೇ ತೊಂದರೆಯಾಗುವುದಿಲ್ಲ ಆದರೆ ಸರ್ಕಾರಕ್ಕೆ ಈಗಾಗಲೇ ಸಲ್ಲಿಸಲಾಗಿರುವ ಪ್ರಸ್ತಾವನೆ ಅನುಮೋದನೆಯಾದ ನಂತರ ಜಂಟಿ ಪರಿವೀಕ್ಷಣೆ ಕೈಗೊಂಡು ವಿಸ್ತ್ರತವಾದ ವರದಿ ಆಧಾರದ ಮೇಲೆ ಸ್ಥಳದ ಅನುಮತಿಗಾಗಿ ಯಾವುದೇ ತೊಂದರೆ ಇಲ್ಲವೆಂದು ಧೃಢೀಕರಿಸಬಹುದಾಗಿದೆ.

ತಮ್ಮ ವಿಶ್ವಾಸಿ,

18/3/2020

ಕಾರ್ಯಪಾಲಕ ಅಭಿಯಂತರು,
ಕನನೀಸ ಮತ್ತು ಒಚ ಮಂಡಳ, ವಿಭಾಗ,
ಕಾರವಾರ

**ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ,**
*ಸಹಾಯಕ ಕಾರ್ಯಪಾಲಕ ಅಭಿಯಂತರವರ ಕಚೇರಿ, ಉಪವಿಭಾಗ*
*ಕಾಜುಭಾಗ, ಕಾರವಾರ- 581301*
**ಕಚೇರಿ ದೂರವಾಣಿ ಸಂಖ್ಯೆ: 08382-225516, ಫ್ಯಾಕ್ಸ್: 08382-222591, ಮೊಬೈಲ್ ನಂ: 9480813167**

ಸಂ.ಕಜಮ/ಸಕಾಅ/ಸಅ/ಕಾರವಾರ/2019-20/ 2054 ದಿನಾಂಕ:-18-03-2020

ರವರಿಗೆ,
ಕಾರ್ಯಪಾಲಕ ಅಭಿಯಂತರು
ಕನನೀಸ ಮತ್ತು ಒಚ ಮಂಡಳಿ
ವಿಭಾಗ, ಕಾರವಾರ,

ಮಾನ್ಯರೇ,

**ವಿಷಯ**:- ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ವತಿಯಿಂದ ಗೋಕರ್ಣ ಮತ್ತು ಇತರ 7 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಡಿ ಕೈಗೊಳ್ಳುವ ಅಭಿವೃದ್ಧಿ ಕಾಮಗಾರಿಗಳಗೆ ನಿರಾಪೇಕ್ಷಣ ಪತ್ರವನ್ನು ನೀಡುವ ಕುರಿತು.

**ಉಲ್ಲೇಖ:** ಸಹಾಯಕ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಕುಮಟಾ ಉಪವಿಭಾಗ, ಕುಮಟಾ ಕಚೇರಿ ಪತ್ರ ಸಂಖ್ಯೆ : 381 ದಿ : 18-03-2020

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ವತಿಯಿಂದ ನಿರ್ಮಿಸಲಾಗಿರುವ ಗುಂಡಬಾಳದ ಗೋಕರ್ಣ ಮತ್ತು ಇತರ 7 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಡಿ ಜ್ಯಾಕ್‌ವೆಲ್ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು 31.56 ಚ.ಮೀ ಜಾಗದ ಅವಶ್ಯಕತೆಯನ್ನು ಪ್ರಸ್ತಾಪಿಸಿ ಸದರಿ ಪ್ರದೇಶದಲ್ಲಿ ಕಾಮಗಾರಿ ಕೈಗೊಳ್ಳಲು ಅರಣ್ಯ ಇಲಾಖೆಯ ಅನುಮತಿಯನ್ನು ಕೋರಿರುವ ಬಗ್ಗೆ ತಿಳಿಸಿರುತ್ತಾರೆ. ಆದರೆ ಸದರಿ ಪ್ರದೇಶವು ಗಂಗಾವಳಿ ನದಿಗೆ ಅಡ್ಡಲಾಗಿ ಕಿಂಡಿ ಅಣೆಕಟ್ಟು ನಿರ್ಮಾಣದಿಂದ ಮುಳುಗಡೆಯಾಗುವ ಅರಣ್ಯ ಜಾಗದಲ್ಲಿ ಬರುವುದರಿಂದ ಗೋಕರ್ಣ ಕುಡಿಯುವ ನೀರು ಯೋಜನೆಯಡಿ ಜ್ಯಾಕ್‌ವೆಲ್ ಅಭಿವೃದ್ಧಿ ಕಾಮಗಾರಿ ಕೈಗೊಂಡಲ್ಲಿ ಮುಂದೆ ನಿರ್ಮಿಸಲ್ಪಡುವ ಕಿಂಡಿ ಅಣೆಕಟ್ಟಿಗೆ ಯಾವುದೇ ತೊಂದರೆ ಆಗುವುದಿಲ್ಲವೆಂದು ಅನುಮತಿ ಮತ್ತು ನಿರಾಪೇಕ್ಷಣ ಪತ್ರವನ್ನು ಕನನೀಸ ಮತ್ತು ಒಚ ಮಂಡಳಿ ವತಿಯಿಂದ ಪಡೆಯಲು ಅರಣ್ಯ ಇಲಾಖೆಯವರು ನಿರ್ದೇಶನ ನೀಡಿರುತ್ತಾರೆ ಎಂದು ಮೇಲಿನ ಉಲ್ಲೇಖದಲ್ಲಿ ತಿಳಿಸಿರುತ್ತಾರೆ.

ಈಗಾಗಲೇ ಗಂಗಾವಳಿ ನದಿಗೆ ಅಡ್ಡಲಾಗಿ ಕಿಂಡಿ ಅಣೆಕಟ್ಟು ನಿರ್ಮಿಸುವ ಸಲುವಾಗಿ ಅರಣ್ಯ / ಅರಣ್ಯೇತರ ಜಾಗಗಳನ್ನು ಬಿಡುಗಡೆ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ. ಪ್ರಸ್ತಾವನೆಯು ಸರ್ಕಾರದಲ್ಲಿ ಪರಿಶೀಲನೆ ಹಂತದಲ್ಲಿರುತ್ತದೆ. ಮೇಲಿನ ಪ್ರಸ್ತಾವನೆಯಲ್ಲಿ ಸೂಚಿಸಿರುವ ಜಾಗದಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ವತಿಯಿಂದ ಕೈಗೊಳ್ಳಲಾಗುವ ಅಭಿವೃದ್ಧಿ ಕಾಮಗಾರಿಗಳಿಂದ ಯಾವುದೇ ತೊಂದರೆಯಾಗುವುದಿಲ್ಲ. ಆದರೆ ಮೇಲಿನ ಪ್ರಸ್ತಾವನೆಯು ಸರ್ಕಾರದಿಂದ ಅನುಮೋದನೆಯಾಗಬೇಕಾಗಿರುತ್ತದೆ. ಈ ವಿಸ್ತ್ರತವಾದ ವಿಷಯವನ್ನು ತಮ್ಮ ನಮ್ರ ಅವಗಾಹನೆಗಾಗಿ ಸಲ್ಲಿಸುತ್ತಾ, ಮುಂದಿನ ನಿರ್ದೇಶನ ನೀಡಲು ಈ ಮೂಲಕ ಕೋರಲಾಗಿದೆ.

ತಮ್ಮ ವಿಶ್ವಾಸಿ,

ಸಹಿ/-
ಸಹಾಯಕ ಕಾರ್ಯಪಾಲಕ ಅಭಿಯಂತರು,
ಕನನೀಸ ಮತ್ತು ಒಚ ಮಂಡಳಿ, ಉಪವಿಭಾಗ,
ಕಾರವಾರ

ಅಡಕ : 1) ಉಲ್ಲೇಖ (1)ರ ಪತ್ರದ ಪ್ರತಿ

D:\System 192.0.33.10\Coverltr AE-3

ಪ್ರತಿಯನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಕುಮಟಾ ಉಪವಿಭಾಗ, ಕುಮಟಾ ರವರಿಗೆ ಕಳುಹಿಸಲಾಗಿದೆ.

ಸಹಾಯಕ ಕಾರ್ಯಪಾಲಕ ಅಭಿಯಂತರು,
ಕನನೀಸ ಮತ್ತು ಒಚ ಮಂಡಳಿ, ಉಪವಿಭಾಗ,
ಕಾರವಾರ

AE-15
19/3/2020

D:\System 192.0.33.10\Coverltr AE-3